**CW : 12**

PW : 9

**1**ನೇ ಹೆಚ್ಚುವರಿ  ಹಿರಿಯ ವ್ಯವಹಾರಿಕ ನ್ಯಾಯಾಧೀಶರು ಮತ್ತು ಹೆಚ್ಚುವರಿ ಮುಖ್ಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಪುತ್ತೂರು, ದ.ಕ.

# CC No.1067/2025

ಸಾಕ್ಷಿದಾರರ ಹೆಸರು : ಸುಷ್ಮಾ ಜಿ ಭಂಡಾರಿ

ತಂದೆಯ ಹೆಸರು : ಶ್ರೀ. ಗೋಪಾಲಕೃಷ್ಣ ಭಂಡಾರಿ

ಪ್ರಾಯ : 35 ವರ್ಷ

ಉದ್ಯೋಗ ಪಿ.ಎಸ್ಐ ಪು. ಗ್ರಾ. ಪೊಲೀಸು ಠಾಣೆ

ವಾಸಸ್ಥಳ : ಪುತ್ತೂರು

ದಿನಾಂಕ:**09-06-2026** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯವಿಚಾರಣೆ: ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ:

ನಾನು 05-08-2024 ರಿಂದ ಪ್ರಸ್ತುತವೂ ಸಹ ಪುತ್ತೂರು ಗ್ರಾಮಾಂತರ ಪೊಲೀಸು ಠಾಣೆಯಲ್ಲಿ ಪಿ.ಎಸ್.ಐ ಎಂದು ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ದಿನಾಂಕ 04-07-2025 ರಂದು ಚಾ.ಸಾ.11 ರವರಿಂದ ಪ್ರಕರಣದ ಕಡತವನ್ನು ಪಡೆದು ಪರಿಶೀಲಿಸಿ ನಂತರ ಚಾ.ಸಾ.1 , ಚಾ.ಸಾ.2 ಹಾಗೂ ಚಾ.ಸಾ.3 ರವರ ಗಾಯದ ಪ್ರಮಾಣಪತ್ರಗಳನ್ನು ಸ್ವೀಕರಿಸಿಕೊಂಡಿರುತ್ತೇನೆ. ಅದೇ ದಿನ ಕೆಯ್ಯೂರು ಗ್ರಾಮ ಪಂಚಾಯತ್ ಪಿಡಿಒ ರವರು ನೀಡಿದ ಘಟನೆ ನಡೆದ ಸ್ಥಳದ ದೃಢಪತ್ರವನ್ನು ಪಡೆದು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ನಂತರ ಸಾಕ್ಷಿದಾರರ ಹೇಳಿಕೆ , ಗಾಯಪ್ರಮಾತಪತ್ರಗಳು , ಪಿಡಿಒ ನೀಡಿದ ದೃಢಪತ್ರವನ್ನು ಪರಿಶೀಲಿಸಿಕೊಂಡು ಅದೇ ದಿನ ದೋಷಾರೋಪಾಣಾ ಪತ್ರವನ್ನು ತಯಾರಿಸಿ ಮಾನ್ಯ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ.

ಚಾ.ಸಾ.10 ರವರು ನೀಡಿದ ದೃಢಪತ್ರ, ಚಾ.ಸಾ.7 ರವರು ನೀಡಿದ ಗಾಯದ ಪ್ರಮಾಣಪತ್ರಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ನಿ.ಪಿ.3 ರಿಂದ 6 ದಾಖಲೆಗಳನ್ನು ಹಾಗೂ ಅವುಗಲ್ಲಿನ ತಮ್ಮ ಸಹಿಗಳನ್ನು ನೋಡಿ ಗುರುತಿಸಿದ್ದು , ಸದರಿ ದಾಖಲೆಗಳಲ್ಲಿನ ಸಾಕ್ಷಿಗಳ ಸಹಿಗಳನ್ನು ನಿ.ಪಿ.3(ಬಿ), ನಿ.ಪಿ4(ಬಿ), ನಿ.ಪಿ.5(ಬಿ) ಮತ್ತು ನಿ.ಪಿ.6(ಬಿ) ಎಂದು ಗುರುತಿಸಲಾಯಿತು.

ಪಾಟೀ ಸವಾಲು:ಆರೋಪಿ ಪರ ಶ್ರೀ ಹೆಚ್.ಪಿ.ಆರ್. ವಕೀಲರಿಂದ:

ದೋಷಾರೋಪಣಾ ಪತ್ರವನ್ನು ಮಾನ್ಯ ನ್ಯಾಯಾಲಯಕ್ಕೆ ಪೂರ್ವ ನಾನು ತಕ್ಷೀರು ಸ್ಥಳಕ್ಕೆ ಹೋಗಿ ಸಾಕ್ಷಿದಾರರ ವಿಚಾರಣೆ ಮಾಡಿಲ್ಲ. ಆರೋಪಿ ಹಾಗೂ ದೂರುದಾರರ ಮಧ್ಯೆ ಈ ಮೊದಲೇ ಕೇಸು

ದಾಖಲು ಆಗಿತ್ತಾ ಅಥವಾ ಇಲ್ಲವಾ ಎನ್ನುವ ಬಗ್ಗೆ ನಾನು ವಿಚಾರಣೆ ಮಾಡಿಲ್ಲ. ಚಾ.ಸಾ.1 ರವರ ಮೇಲೆ ರುಕಿಯಾ ಎನ್ನುವವರ ಮಗಳು ಅದೇ ದಿನ ನಮ್ಮ ಪೊಲೀಸು ಠಾಣೆಯಲ್ಲಿ ದೂರು ದಾಖಲು ಮಾಡಿದ ಬಗ್ಗೆ ಗೊತ್ತು. ಅದೇ ದಿನ ಚಾ.ಸಾ.1 ರವರ ಮೇಲೆ ಅ. ಕ್ರ .ಸಂಖ್ಯೆ 25/2025 ರಂತೆ ಎಫ್ ಐಆ್ ದಾಖಲು ಆದ ಬಗ್ಗೆ ಗೊತ್ತಿಲ್ಲ. ನನ್ನ ಕೆಳ ಹಂತದ ಸಿಬ್ಬಂದಿ ವರ್ಗದವರು ದಾಖಲಿಸಿದ ಸುಳ್ಳು ಕೇಸಿಗೆ ಪೂರಕವಾಗಿ ಸಮರ್ಪಕವಾದ ತನಿಖೆಯನ್ನು ಮಾಡದೇ ಆರೋಪಿ ವಿರುದ್ದ ಸುಳ್ಳು ದೋಷಾರೋಪಣಾ ಪತ್ರವನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಆರೋಪಿ ಚಾ.ಸಾ.1 ರಿಂದ 3 ರವರು ಯಾವುದೇ ರೀತಿಯ ಅಪರಾಧಿಕ ಕೃತ್ಯಗಳನ್ನು ನಾನು ದೋಷಾರೋಪಣಾ ಪತ್ರದಲ್ಲಿ ಹೆಸರಿಸಿಲ್ಲ ಎಂದರೆ ಸರಿಯಲ್ಲ. ಚಾ.ಸಾ.1 ರಿಂದ 3 ರವರು ಬಿದ್ದು ಮಾಡಿಕೊಂಡ ಗಾಯವನ್ನು ದುರುಪಯೋಗ ಪಡಿಸಿಕೊಂಡು ಸುಳ್ಳು ಕೇಸನ್ನು ಆರೋಪಿ ವಿರುದ್ದ ದಾಖಲು ಮಾಡಲಾಗಿದೆ ಎಂದರೆ ಸರಿಯಲ್ಲ. ನಿ.ಪಿ.3 ರಿಂದ 6 ರ ದಾಖಲೆಗಳನ್ನು ಸೃಷ್ಟಿಸಿ ಹಾಜರುಮಾಡಲಾಗಿದೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

ನನ್ನ ಉಕ್ತಲೇಖನದ ರೀತ್ಯ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸರಿ.ಇದೆ.

1ನೇ ಹೆಚ್ಚುವರಿ ಹಿರಿಯ ವ್ಯವಹಾರಿಕ ನ್ಯಾಯಾಧೀಶರು,
ಮತ್ತು ಜೆಎಂಎಫ್‌ಸಿ, ಪುತ್ತೂರು, ದ.ಕ.